## ಭಾರತೀಯ ನಾರಿಯರ ಮುಂದಾಳು

# ಸರಳಾದೇವಿ ಚೌಧುರಾಣಿ

ಸಂಗ್ರಹ: **ಸ್ವರ್ಣಗೌರಿ**

ಸ್ವಾಮಿ ವಿವೇಕಾನಂದರಿಂದ ಪ್ರೇರಣೆ ಪಡೆದು ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಕಾರ್ಯವನ್ನೆಸಗಿದ ಮಹಿಳೆಯರ ಸಂಕ್ಷಿಪ್ತ ಜೀವನ ಚರಿತ್ರೆಗಳನ್ನೊಳಗೊಂಡ ಚಿಕ್ಕ ಕೃತಿ 'Swami Vivekananda : The Great Inspirer.' ಇದನ್ನು ರಾಮಕೃಷ್ಣ ಶಾರದಾ ಮಿಷನ್ ಪ್ರಕಟಿಸಿದೆ. ಈ ಕೃತಿಯಿಂದ ಆಯ್ದ ಕೆಲವು ಮಂದಿ ಸಾಧಕಿಯರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು 'ವಿವೇಕಪ್ರಭ'ದಲ್ಲಿ ಪ್ರಕಟಿಸಲಾಗುವುದು. ಇದನ್ನು ಸಂಗ್ರಹಿಸಿ, ಅನುವಾದಿಸಿಕೊಟ್ಟ ಲೇಖಕಿ, ಮೈಸೂರು ಆಶ್ರಮದ ಭಕ್ತರು. ಅವರು ಹಲವು ಲೇಖನ, ಗ್ರಂಥಗಳನ್ನು ರಚಿಸಿದ್ದಾರೆ.

**ಸು**ಪ್ರಸಿದ್ಧ ಬಂಗಾಳಿ ಕವಿ ರವೀಂದ್ರನಾಥ ಠಾಗೋರರ ಹಿರಿಯಕ್ಕ ಹಾಗೂ ದೇವೇಂದ್ರನಾಥ ಠಾಗೋರರ ಜ್ಯೇಷ್ಠ ಪುತ್ರಿ ಸ್ವರ್ಣಕುಮಾರಿ ದೇವಿ. ಬಂಗಾಳಿ ಸಾಹಿತ್ಯ ಕ್ಷೇತ್ರದಲ್ಲಿ ಪ್ರಥಮ ಮಹಿಳಾ ಕಾದಂಬರಿಕಾರಳೆಂಬ ಬಿರುದು ಪಡೆದಿದ್ದ ಸ್ವರ್ಣಕುಮಾರಿ ದೇವಿಯ ಪುತ್ರಿಯೇ ಸರಳಾದೇವಿ. ಈಕೆ ಕ್ರಿ.ಶ. ೧೮೯೦ರಲ್ಲಿ ಇಂಗ್ಲೀಷ್ ಸಾಹಿತ್ಯ ಬಿ.ಎ. ಪದವಿ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ, ಕೋಲ್ಕತ್ತಾ ವಿಶ್ವವಿದ್ಯಾನಿಲಯದ 'ಪದ್ಮಾವತಿ ಚಿನ್ನದ ಪದಕ' ವನ್ನು ಪಡೆದಿದ್ದಳು. ೧೮೯೭ರಲ್ಲಿ ಸೈನಿಕರಿಗೆ ಅಂಗಸಾಧನೆಯ ತರಬೇತಿ ನೀಡಲು ಗರಡಿಮನೆ ಸ್ಥಾಪಿಸಿದಳು. ಕತ್ತಿವರಸೆ, ಲಾಠಿಪ್ರಯೋಗಗಳಲ್ಲಿ ಗೋವಾದ ಸುಪ್ರಸಿದ್ಧ ಮಲ್ಲನೊಬ್ಬನನ್ನು ನಿಯಮಿಸಿದಳು. ಬಾಗಾ ಜತಿನ್, ಬರೀಂದ್ರ ಕುಮಾರ್ ಘೋಷ್ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯರಾಗಿದ್ದ ಶ್ರೀ ಅರವಿಂದರಿಗೆ  ಇದು ಮುಂದೆ ಗೆರಿಲ್ಲಾ ಕಾಳಗಕ್ಕೆ ಪ್ರಜಾಸೈನ್ಯ ಕೂಡಿಸಲು ಒಂದು ಹೆಜ್ಜೆಯಾಯಿತು.

ಈ ಎಲ್ಲ ಕಾರ್ಯಗಳ ಹಿಂದೆ ಸರಳಾದೇವಿಯ ಗುರಿ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸಿ, ಬಂಗಾಳದ ರಾಷ್ಟ್ರಶಕ್ತಿಯನ್ನು ಪುನರುಜ್ಜೀವನಗೊಳಿಸುವುದಾಗಿತ್ತು. ಕ್ರಿ.ಶ. ೧೯೦೫ರಲ್ಲಿ ಆರ್ಯಸಮಾಜ ಹಾಗೂ ಕಾಂಗ್ರೆಸ್‌ನ ಸದಸ್ಯ ಮತ್ತು ಸಂಪಾದಕ ಪಂಡಿತ್ ರಾಮ್‌ಭುಜ್ ದತ್ತನೊಡನೆ ವಿವಾಹವಾಗಿ ಗೃಹಸ್ಥ ಜೀವನಕ್ಕೆ ಕಾಲಿಟ್ಟಳು ಸರಳಾದೇವಿ. ಈ ದಂಪತಿಗಳ ಪುತ್ರ ದೀಪಕ್ ದತ್ತನು ಮುಂದೆ ಮಹಾತ್ಮಾ ಗಾಂಧೀಜಿಯವರ ಮೊಮ್ಮಗಳಾದ ರಾಧಾಳನ್ನು ವರಿಸಿದನು. ಅಲಹಾಬಾದಿನಲ್ಲಿ ಸ್ತ್ರೀಶಿಕ್ಷಣ ಪ್ರಗತಿಗೆಂದು ಭಾರತದಲ್ಲೇ ಪ್ರಪ್ರಥಮವಾಗಿ ಕ್ರಿ.ಶ. ೧೯೧೦ರಲ್ಲಿ 'ಭಾರತ ಸ್ತ್ರೀ ಮಹಾಮಂಡಲ'ವೆಂಬ ಸ್ತ್ರೀಯರ ಸಂಘವನ್ನು ಸ್ಥಾಪಿಸಿದ ಕೀರ್ತಿ ಸರಳಾದೇವಿಗೆ ಸಲ್ಲುತ್ತದೆ. ಮುಂದೆ ಲಾಹೋರ್ (ಆಗ ಅದು ಭಾರತದ ಗಡಿಯಲ್ಲಿತ್ತು), ಅಲಹಾಬಾದ್, ದೆಹಲಿ, ಕರಾಚಿ, ಅಮೃತಸರ, ಹೈದರಾಬಾದ್, ಕಾನ್ಪುರ, ಬಂಕುರಾ, ಹಜಾರಿಭಾಗ್, ಮೇದಿನಿಪುರ ಹಾಗೂ



ಕೊಲ್ಕತ್ತಾದಲ್ಲಿ ಇದರ ಶಾಖೆಗಳು ಪಸರಿಸಿದವು. ಸರಳಾದೇವಿ 'ಭಾರತಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ, ಅದರಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತು ಲೇಖನಗಳನ್ನು ಪ್ರಕಟಿಸಿದಳು. ಸ್ವಾಮಿ ವಿವೇಕಾನಂದರು ಒಮ್ಮೆ ಈಕೆಗೆ ಬರೆದ ಪತ್ರ ನಮಗೆ ಸರಳಾದೇವಿಯ ಹಿರಿಮೆಯನ್ನು ತಿಳಿಸುತ್ತದೆ:

''ಗೌರಾವಾನ್ವಿತ ತಾಯಿ,

ನೀವು ಕಳುಹಿಸಿದ 'ಭಾರತಿ' ಪತ್ರಿಕೆಗೆ ನನ್ನ ಕೃತಜ್ಞತೆಗಳನ್ನು ಸ್ವೀಕರಿಸಿ. ಯಾವ ಕಾರಣಕ್ಕಾಗಿ ನನ್ನ ಜೀವನವನ್ನು ಅರ್ಪಿಸಿರುವೆನೋ, ಅದು ನಿಮ್ಮಂತಹ ಪ್ರತಿಭಾವಂತ ಸ್ತ್ರೀಯರ ಮೆಚ್ಚುಗೆಗೆ ಪಾತ್ರವಾದ್ದರಿಂದ, ನಾನು ಅದೃಷ್ಟವಂತನೆಂದು ಭಾವಿಸುವೆ.

ಇಂತಹ ದುರದೃಷ್ಟವಂತ ದೇಶದಲ್ಲಿ, ಜೀವನ ಸಂಗ್ರಾಮದಲ್ಲಿ ಹೊಸ ಆಲೋಚನೆಗಳ ಪ್ರವರ್ತಕನನ್ನು ಪುರುಷರೇ

ಪ್ರೋತ್ಸಾಹಿಸುವುದು ವಿರಳವಾಗಿರುವಾಗ, ಇನ್ನು ಸ್ತ್ರೀಯರ ಮಾತೇನು? ಆದ್ದರಿಂದ ಭಾರತದೇಶದ ಪುರುಷರೆಲ್ಲರ ಕೈ ಚಪ್ಪಾಳೆಗಿಂತ ವಿದ್ಯಾವಂತ ಬಂಗಾಳಿ ಮಹಿಳೆಯ ಮೆಚ್ಚುಗೆಯು ಹೆಚ್ಚು ಮೌಲ್ಯವುಳ್ಳದ್ದು.

ಭಗವಂತನ ಕೃಪೆಯಿಂದ ನಿಮ್ಮಂತಹ ಸ್ತ್ರೀಯರ ಸಂಖ್ಯೆ ಈ ದೇಶದಲ್ಲಿ ಹೆಚ್ಚಲಿ ಹಾಗೂ ಅವರು ತಮ್ಮ ಮಾತೃಭೂಮಿಯ ಉದ್ಧಾರಕ್ಕಾಗಿ ಜೀವನವನ್ನು ಅರ್ಪಿಸುವಂತಾಗಲಿ.

'ಭಾರತಿ' ಪತ್ರಿಕೆಯಲ್ಲಿ ನನ್ನ ಕುರಿತು ನೀವು ಬರೆದಿರುವ ಲೇಖನ ಕುರಿತು ಕೆಲವು ವಿಷಯಗಳನ್ನು ಹೇಳಬೇಕಾಗಿದೆ... ನಮ್ಮಲ್ಲಿ ವೇದಾಂತದ ತತ್ತ್ವವಿದೆ, ಆದರೆ ಅದನ್ನು ಕಾರ್ಯ ರೂಪಕ್ಕೆ ತರುವ ಶಕ್ತಿಯಿಲ್ಲ. ಪುಸ್ತಕಗಳಲ್ಲಿ ವಿಶ್ವಮಾನವತೆಯ ಪದಗಳಿವೆ, ಆದರೆ ಕಾರ್ಯಾಚರಣೆಯಲ್ಲಿ ಬಹಳ ವ್ಯತ್ಯಾಸ ವನ್ನು ಕಾಣುತ್ತೇವೆ... ಆದರೂ ಪ್ರಸ್ತುತ ಪರಿಸ್ಥಿತಿಯನ್ನು ಆಧರಿಸಿಯೇ ನಾವು ಕೆಲಸದಲ್ಲಿ ಮುಂದುವರೆಯಬೇಕಾಗಿದೆ. ಬೇರೆ ದಾರಿಯೇ ಇಲ್ಲ. ಪ್ರತಿಯೊಬ್ಬರಲ್ಲೂ ಒಳಿತು, ಕೆಡುಕು ಗಳನ್ನು ಗುರುತಿಸುವ ಶಕ್ತಿಯಿದೆ. ಕಷ್ಟ-ನಷ್ಟ, ದುಃಖ, ಸಂಕಟ, ಭ್ರಾಂತಿಗಳಿಂದ ಕೂಡಿದ ಈ ಸಂಸಾರದಲ್ಲಿ ಯಾರು ಒಂದು ಕೈಯಲ್ಲಿ ಇತರರ ಕಣ್ಣೀರು ಒರಸುತ್ತಾ, ಮತ್ತೊಂದು ಕೈಯಲ್ಲಿ ಬಿಡುಗಡೆಯ ಪಥವನ್ನು ತೋರುವನೋ ಆತನೇ ವೀರ ಪುರುಷ. ಒಂದೆಡೆ ನಿಷ್ಕ್ರಿಯ ದ್ರವ್ಯರಾಶಿಯಂತಿರುವ ಸಾಂಪ್ರ ದಾಯಿಕ ಸಮಾಜ, ಮತ್ತೊಂದೆಡೆ ಅಶಾಂತಿ, ಅಸಹನೆಗಳಿಂದ ಕೂಡಿರುವ ಬೆಂಕಿಯನ್ನೇ ಉಗುಳುತ್ತಿರುವ ಸಮಾಜ ಸುಧಾ ರಕ; ಇವೆರಡರ ನಡುವೆಯೇ ಒಳಿತಿನ ದಾರಿಯಿರುವುದು. ಜಪಾನ್ ದೇಶದಲ್ಲಿ ಹೆಣ್ಣುಮಕ್ಕಳು ತಮ್ಮ ಬೊಂಬೆಗಳನ್ನು ಹೃತ್ಪೂರ್ವಕವಾಗಿ ಪ್ರೀತಿಸಿದರೆ ಅವು ಸಜೀವವಾಗುತ್ತವೆ ಎಂಬ ನಂಬಿಕೆ ಪ್ರತೀತಿಯಲ್ಲಿದೆ ಎಂದು ಕೇಳಿದ್ದೇನೆ. ಜಪಾನಿನ ಹೆಣ್ಣು ಮಕ್ಕಳು ತಮ್ಮ ಬೊಂಬೆಗಳನ್ನು ಎಂದೂ ಮುರಿಯರು. ಓ ಸೌಭಾಗ್ಯವಂತರೇ! ಅಜ್ಞಾನಿಗಳು, ಅಧಃಪತನವಾಗಿರು ವವರು, ಹಸಿವಿನಿಂದ ಕಂಗೆಟ್ಟವರು, ಜಗಳಗಂಟರು, ಈರ್ಷ್ಯೆ ಯಿಂದ ಕೂಡಿದ, ಶ್ರೀಮಂತಿಕೆ ಹಾಗೂ ಅದೃಷ್ಟಗಳಿಂದ ವಂಚಿತರಾದ ನನ್ನ ದೇಶದ ಜನರನ್ನು ಯಾರಾದರೂ ಹೃದಯ ಪೂರ್ವಕವಾಗಿ ಪ್ರೀತಿಸಿದರೆ, ನನ್ನ ಭಾರತದೇಶವೂ ಮತ್ತೊಮ್ಮೆ ಜಾಗೃತವಾಗುವುದೆಂಬ ನಂಬಿಕೆ ನನಗಿದೆ. ನೂರಾರು ಉದಾರ ಮನಸ್ಸಿನ ಸ್ತ್ರೀಪುರುಷರಿಬ್ಬರೂ ಈ ಭೋಗಜೀವನದ ಲಾಲಸೆ ಯನ್ನು ತೊರೆದು, ಅಜ್ಞಾನ ಹಾಗೂ ದರಿದ್ರತೆಯ ಕೂಪದಲ್ಲಿ ಸಿಲುಕಿ ಕ್ರಮೇಣ ಮುಳುಗುತ್ತಿರುವ ಸಹಸ್ರಾರು ಜನರ ಒಳಿ ತನ್ನೇ ಹಾರೈಸುತ್ತಾ, ತಮ್ಮನ್ನೇ ತಾವು ಸಂಪೂರ್ಣವಾಗಿ ಅರ್ಪಿಸಿ ಕೊಂಡರೆ ಮಾತ್ರವೇ ಭಾರತದೇಶವು ಜಾಗೃತವಾಗುವುದು. ಸದುದ್ದೇಶ, ಪ್ರಾಮಾಣಿಕತೆ ಹಾಗೂ ಅನಂತ ಪ್ರೀತಿಯಿಂದ ಜಗತ್ತನ್ನೇ ಗೆಲ್ಲಬಹುದೆಂದು ನಾನು ನನ್ನ ಅಲ್ಪ ಜೀವನದ ಅನು ಭವದಿಂದ ಹೇಳಬಲ್ಲೆ. ಸಹಸ್ರಾರು ಆಷಾಢಭೂತಿಗಳ ಹಾಗೂ ಚಂಡಾಲರ ದುರದೃಷ್ಟವನ್ನು ಇಂತಹ ಸದ್ಗುಣಗಳುಳ್ಳ ಒಂದೇ ಒಂದು ಜೀವಿಯು ಅಳಿಸಿಹಾಕಬಲ್ಲದು.

ಸದಾ ಕೃತಜ್ಞನಾದ ಹಾಗೂ ನಿಮ್ಮ ಒಳಿತಿಗಾಗಿ ಯಾವಾ ಗಲೂ ಭಗವಂತನಲ್ಲಿ ಮೊರೆಯಿಡುವ,

— ವಿವೇಕಾನಂದ

''ನೀವು ಸ್ತ್ರೀಪುರುಷರನ್ನು ಅಳೆಯುವಾಗ ಅವರವರ ಶ್ರೇಷ್ಠತೆಯ ದೃಷ್ಟಿಯಿಂದ ಅಳೆಯಿರಿ... ''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೬, ಪು. ೧೭೪)*

**ಸ್ತ್ರೀಯರ ಸ್ಥಿತಿ ಉತ್ತಮವಾಗುವ ತನಕ ಪ್ರಪಂಚ ಉತ್ತಮವಾಗಲಾರದು. ಒಂದು ಹಕ್ಕಿ ಕೇವಲ ಒಂದೇ ರೆಕ್ಕೆಯ ಬಲದಿಂದ ಹಾರಲಾರದು.**

*— ಸ್ವಾಮಿ ವಿವೇಕಾನಂದ*


**ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಶಿಬಿರ)**

**2017 ಜೂನ್ 28 ರಿಂದ ಜುಲೈ 2 ರವರೆಗೆ ; *ಮಾಧ್ಯಮ:* ಕನ್ನಡ ಮತ್ತು ಇಂಗ್ಲಿಷ್**

**ಊಟ ಹಾಗೂ ವಿಶೇಷ ವಸತಿ ಸೌಲಭ್ಯಗಳಿರುವ ಐದು ದಿನಗಳ ಶಿಬಿರಕ್ಕಾಗಿ: ರೂ. 2,500/- ಮಾತ್ರ**

*ಶಿಬಿರದ ಎಲ್ಲ ಐದು ದಿನಗಳು ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. *140 ಶಿಬಿರಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ. *ಒಂದು ವೇಳೆ ಆಯ್ಕೆಗೊಂಡ ಶಿಬಿರಾರ್ಥಿಗಳು ಬರದೆ ಇದ್ದಲ್ಲಿ ಅವರ ಪ್ರತಿನಿಧಿಯಾಗಿ ಬೇರೆ ಯಾರಿಗೂ ಅವಕಾಶವಿರುವುದಿಲ್ಲ. *ಒಂದು ವೇಳೆ ಶಿಬಿರಾರ್ಥಿಗಳು ಶಿಬಿರಕ್ಕೆ ಬರದೆ ಇದ್ದಲ್ಲಿ ರೂ.2000/- ಅನ್ನು ಮಾತ್ರ ಹಿಂತಿರುಗಿಸಲಾಗುವುದು. *ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ವಿಳಾಸವಿರುವ (10cmx23cm) ಲಕೋಟೆಗೆ ರೂ.5/- ಅಂಚೆ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟರ ಹೆಸರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ. *ಅರ್ಜಿಫಾರಂಗಳನ್ನು www.rimse.org.in ವೆಬ್‌ಸೈಟಿನಿಂದಲೂ ಡೌನ್‌ಲೋಡ್ ಮಾಡಿ, ಭರ್ತಿಮಾಡಿ, ಸ್ಕ್ಯಾನ್ ಮಾಡಿ ಕಳುಹಿಸಬಹುದು. *ತುಂಬಿದ ಅರ್ಜಿಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ಜೂನ್ 10, 2017.

ವಿಳಾಸ: Ramakrishna Institute of Moral and Spiritual Education, Yadavagiri, Mysore-570020
Phone:0821-2417666 ; E-mail: mysore.rimse@gmail.com; Website: www.rimse.org.in